ಆ ಗೌಜು, ಗದ್ದಲ, ಅನಗತ್ಯ ಓಡಾಟ, ನಗು, ಸಂಭ್ರಮದಿಂದ ಕೂಡಿದ ಮಾತು ಓರೆನೋಟಗಳು ಮತ್ತು ಹರೆಯದ ಬಳುಕಾಟಗಳ ನಡುವೆ ಅವಳು ಇದ್ದೂ ಇಲ್ಲದಂತೆ ಕುಳಿತಿದ್ದಳು. ಯಾವುದೋ ಒಂದು ದೊಡ್ಡ ಹೊರೆ ಇಳಿದಂತೆ ರೆಹಮತ್ ನಿರುಮ್ಮಳವಾಗಿದ್ದಳು. ಆ ಸಡಗರ ಮತ್ತು ಸಂಭ್ರಮದ ನಡುವೆಯೂ ಅವಳು ಏಕಾಂಗಿಯಾಗಿದ್ದಳು. ಮಗಳನ್ನು ಬೀಳ್ಕೊಡುವ ದುಗುಡವೋ ಅಥವಾ ತನ್ನೆಲ್ಲಾ ಕಷ್ಟ ಪರಿಹಾರವಾದುದರಿಂದ ಮೂಡಿ ಬಂದ ನೆಮ್ಮದಿಯೋ ಅವಳಿಗೆ ಅರ್ಥವಾಗಲಿಲ್ಲ. ತನ್ನ ಮಗಳ ಬೀಗರೂಟದ ಗೌಜು ಗದ್ದಲದ ನಡುವೆ ಅವಳು ಸಂತೋಷ ಮತ್ತು ದುಃಖದ ಭಾವವನ್ನು ಏಕಕಾಲದಲ್ಲಿ ಅನುಭವಿಸುತ್ತಾ ವೇದಿಕೆಯತ್ತ ದೃಷ್ಟಿ ಹಾಯಿಸಿದಳು. ಇಡೀ ಸಮಾರಂಭದ ಕೇಂದ್ರಬಿಂದುವಾಗಿದ್ದ ಅವಳ ಮಗಳು ಅಜ್ರಾ ಹೂರ್ ಪರಿ(ಸ್ವರ್ಗಲೋಕದ ಕನ್ನಿಕೆ)ಯಂತೆ ಕಂಗೊಳಿಸುತ್ತಿದ್ದಳು. ಅವಳಿಗೆ ತಾಗಿಕೊಂಡಂತೆಯೇ ಇದ್ದ ಅವಳ ಅಳಿಯ ಫಹದ್ ಹೊಸ ಸೂಟಿನಲ್ಲಿ ಎದ್ದು ಕಾಣುತ್ತಿದ್ದ. ಕಣ್ಣಲ್ಲಿ ಕಣ್ಣಿಟ್ಟು ದೋಷ ಹುಡುಕುವಂಥವರು ಕೂಡಾ ಅನುರೂಪವಾದ ಜೋಡಿ ಎಂದು ಒಪ್ಪುವ ಹಾಗೆ ಇತ್ತು. ತನ್ನ ದೃಷ್ಟಿತಾಕಿತೇನೋ ಎಂದು ಅವಳು ತನ್ನ ನೋಟವನ್ನು ಅತ್ತಿತ್ತ ಹಾಯಿಸಿ ಯಾರ ಕೆಟ್ಟ ದೃಷ್ಟಿಯೂ ಅವರಿಗೆ ತಾಗದಿರಲಿ ಎಂದು ಮನಸ್ಸಿನಲ್ಲಿಯೇ ಕುರಾನ್‌ನ ಆಯತನ್ನು(ಶ್ಲೋಕವನ್ನು) ಪಠಿಸಿ ದೃಷ್ಟಿ ದೋಷವನ್ನು ಹೊರಗಟ್ಟಿ, ಮನೆಗೆ ಹೋದಕೂಡೇ ದೃಷ್ಟಿ ನೀವಳಿಸಬೇಕು ಅಂದುಕೊಂಡಳು

ಅವಳ ಅಳಿಯ ಫಹದ್‌ನ ಅಣ್ಣಂದಿರು ಭರ್ಜರಿ ಊಟದ ವ್ಯವಸ್ಥೆ ಮಾಡಿದ್ದರು. ಏನಿತ್ತು... ಏನಿರಲಿಲ್ಲ ಅಂದಿನ ಅಡುಗೆಯಲ್ಲಿ, ಬಿರಿಯಾನಿಯಂತೂ ಇದ್ದೇ ಇರುತ್ತೆ. ಆದರೆ, ತಲೆ ಕಾಲು, ಬೋಟಿ, ಫಿಶ್‌ಫ್ರೈ, ಕಾಯಿನ್ ಪರೋಟ ಅಬ್ಬಬ್ಬಾ ಒಂದು ನಮೂನೆ ಇದೆ. ಒಂದು ಇಲ್ಲ ಅಂತ ಹೇಳೋಕಾಗಲ್ಲ. ಅಳಿಯನಂತೂ ಈಗ ತಾನೇ ಅಮೆರಿಕದಿಂದ ಮರಳಿದ್ದ ಮದುವೆಯ ಸಲುವಾಗಿ. ಅವನ ದುಡಿಮೆಯನ್ನು ಅವನ ಅಣ್ಣಂದಿರು ಚೆಲ್ಲಾಡದೆ ಇನ್ನೇನು ಮಾಡಿಯಾರು ಎಂದು ಒಂದರೆಗಳಿಗೆ ಈರ್ಷೆಯ ಭಾವ ಜಾಗೃತವಾಯಿತೂ ಅನ್ನಿ. ಹಾಗೆಂದುಕೊಂಡೇ ಊಟಕ್ಕೆಂದು ಆಕೆಯನ್ನು ಕರೆದವರನ್ನು ಅನುಸರಿಸಿ ಒಂದು ಹೆಜ್ಜೆ ಮುಂದಿಟ್ಟಿದ್ದಳವಳು.

ಅಷ್ಟರಲ್ಲೇ ಮೊಬೈಲ್‌ನ ಸದ್ದು... ಯಾರದಿರಬಹುದು! ಎಂದು ಯೋಚಿಸುತ್ತಾ ಅರೆ! ಅದು ತನ್ನದೇ ಮೊಬೈಲು ಎಂದು ಖಾತರಿಯಾಗಿ ತನ್ನ ಹ್ಯಾಂಡ್‌ಬ್ಯಾಗಿನ ಪದರು ಪದರುಗಳನ್ನು ಜಾಲಾಡಿಸುತ್ತಾ ಹುಡುಕುತ್ತಿರುವಷ್ಟರಲ್ಲೇ ಅದರ ಸದ್ದಡಗಿ ಹೋಯಿತು. ಅದರ ಕುತ್ತಿಗೆ ಹಿಸುಕುವಷ್ಟು ಕೋಪ ಬಂತವಳಿಗೆ. ಅವಳ ಮಗ ನಯಾಜ್ ಅಶ್ಲೀಲವಾದ ಹಿಂದಿ ಹಾಡನ್ನು ರಿಂಗ್‌ಟೋನ್‌ನಲ್ಲಿ ಅಳವಡಿಸಿದ್ದ ಎಂದು ಅವಳ ಅನಿಸಿಕೆ .'ಬದಲಾಯಿಸಿ ಕೊಡೋ' ಎಂದು ಹಲವು ಹತ್ತು ಸಾರಿ ಅವಳು ಮಗನನ್ನು ಗೋಗರೆದಿದ್ದಳು. ಪ್ರತಿಸಾರಿಯೂ ಅಂತಹುದೇ ದರಿದ್ರ... ದರಿದ್ರ... ಪ್ರೇಮ ನಿವೇದನೆಯ ಹಾಡುಗಳನ್ನೇ ಅಳವಡಿಸುತ್ತಿದ್ದನಾತ. ಅವಳು ನಿರಾತಂಕವಾಗಿ ಇನ್ನೂ ಒಂದೆರಡು ಹೆಜ್ಜೆ ಇಡುವಷ್ಟರಲ್ಲಿ ಮತ್ತೆ ಅದು ಹಾಡತೊಡಗಿತು.

ನೋಟ ಮಾತ್ರ ಗಂಡುಹೆಣ್ಣಿನ ಸುತ್ತಾ ಸುಳಿಯುತ್ತಿದ್ದರೂ ಮನಸ್ಸು ಹಿಂದಕ್ಕೋಡಿತ್ತು. ಹೆತ್ತವರಿಗೆ ಹೆಗ್ಗಣ ಮುದ್ದು ಎಂಬಂತೆ ಅವಳೇನೂ ರಿಯಾಯ್ತಿಯ ಮೇರೆಗೆ ಅಭಿಮಾನ ಪಡುವಂತಿರಲಿಲ್ಲ. ವಾಸ್ತವವಾಗಿಯೂ ಅಜ್ರಾ ಅಪ್ರತಿಮ ಸುಂದರಿಯಾಗಿದ್ದಳು. ಇಲ್ಲವಾಗಿದ್ದಲ್ಲಿ ಹೀಗೆ ಇಂಟರ್‌ನೆಟ್ ಮ್ಯಾಚ್ ಮೇಕಿಂಗಿಗೆಂದು ಅವಳ ಫೋಟೊ ಹಾಕಿದ ಕೂಡಲೇ ಇಷ್ಟೊಂದು ಗಂಡುಗಳು ತಮ್ಮ ಟೆಲಿಫೋನಿಗೆ ಎಡತಾಕುವರೆಂದು ಅವಳಿಗೆ ನಂಬಿಕೆಯೇ